ಕರ್ನಾಟಕ ವಿಧಾನಸಭೆ

ಸೋಮವಾರ 12ನೇ ಜನವರಿ 2004 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10-40 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ) ರವರು

ಪೀಠವನ್ನು ಅಲಂಕರಿಸಿದ್ದರು

(ಬಿಜೆಪಿ ಸದಸ್ಯರಿಂದ ಸದನದ ಭಾವಿಯಲ್ಲಿ ಧರಣಿ)

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1) ವಿಷಯ :- ಬರ ಪರಿಸ್ಥಿತಿ ಬಗ್ಗೆ ಚರ್ಚಿಸಲು ಅವಕಾಶ ಕೋರಿಕೆ

†**ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ)** : ಮಾನ್ಯ ಅಧ್ಯಕ್ಷರೇ, ನಮ್ಮ ವಿಧಾನಸಭಾ ಕ್ಷೇತ್ರದಲ್ಲಿ ಬಹಳ ಅನಾನುಕೂಲವಾಗಿದೆ. ರೈತರು ಬಹಳ ಕಷ್ಟದಲ್ಲಿದ್ದಾರೆ. ಬರ ಪರಿಸ್ಥಿತಿಯಿದ್ದು ಇವತ್ತು ಬೆಳೆಯಿಲ್ಲ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ಇಂತಹ ಒಂದು ಪರಿಸ್ಥಿತಿಯಲ್ಲಿ ಚರ್ಚೆ ಮಾಡಲಿಕ್ಕೆ ಇದುವರೆಗೂ ತಾವು ಅವಕಾಶವನ್ನು ಕೊಡುತ್ತಿಲ್ಲ. ಧರಣಿ ಮಾಡುವವರಿಗೆ ಹೆಚ್ಚಿನ ರೀತಿಯ ಆಸಕ್ತಿಯನ್ನು ಕೊಡತಕ್ಕಂಥದ್ದು ಕಾಣುತ್ತಿದೆ. ಆದುದರಿಂದ ದಯವಿಟ್ಟು ನಮಗೆಲ್ಲಾ ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕು, ಏಕೆಂದರೆ ನಾವು ಕೂಡ ಶಾಸಕರಾಗಿ ಗೆದ್ದು ಬಂದು ನಮ್ಮ ಕ್ಷೇತ್ರಗಳ ಸೌಲಭ್ಯವನ್ನು ಸರ್ಕಾರದಿಂದ ಪಡೆಯಬೇಕಾಗಿದೆ. ಆದರೆ ಇವರು ಇದೇ ರೀತಿ ಧರಣಿ ಮಾಡಿಕೊಂಡಿದ್ದರೆ ನಮ್ಮ ಕ್ಷೇತ್ರದ ರೈತರ ಕಷ್ಟ ಸುಖಗಳನ್ನು ಇವರು ಏನು ಅರ್ಥ ಮಾಡಿಕೊಳ್ಳುತ್ತಿದ್ದಾರೆ.

(ಗೊಂದಲ)

ಆದ್ದರಿಂದ ಇವತ್ತು ಕೇವಲ ರಾಜಕೀಯ ಮಾಡುವ ಉದ್ದೇಶದಿಂದ, ಚುನಾವಣೆಯ ದೃಷ್ಟಿಯಿಂದ ಮಾಡುತ್ತಿದ್ದಾರೆಯೇ ವಿನಃ ರೈತರ ಸಮಸ್ಯೆಗಳ ಪರಿಹಾರ ಮಾಡತಕ್ಕಂತಹ ಕೆಲಸಕ್ಕೆ ಇವರು ಹೋಗುತ್ತಿಲ್ಲ. ಇವರು ಸದನದ ವೇಳೆಯನ್ನು ಹಾಳು ಮಾಡುತ್ತಿದ್ದಾರೆ. ಏಕೆಂದರೆ ನಾವೂ ಕೂಡ ಶಾಸಕರಾಗಿ ಆಯ್ಕೆಯಾಗಿ ಬಂದಿದ್ದೇವೆ.

ಅಧ್ಯಕ್ಷರು : ನಾಯ್ಡು ಅವರೇ, ಹಿಂತಿರುಗಿ ನಿಲ್ಲಬೇಡಿ, ದಯವಿಟ್ಟು ಅಧ್ಯಕ್ಷರಿಗೆ ಮುಖ ತೋರಿಸಿ ನಿಂತುಕೊಳ್ಳಬೇಕು.

ಶ್ರೀ ಎನ್. ಸಂಪಂಗಿ : ಇವರು ರಾಜಕೀಯ ಉದ್ದೇಶದಿಂದ ಮಾತ್ರ ಮಾಡುತ್ತಿದ್ದಾರೆ, ಇವರಿಗೊಬ್ಬರಿಗೆ ಅಧಿಕಾರವಿರುವುದು ಎಂದು ತಿಳಿಯುವುದು ಸರಿಯಲ್ಲ. ನಾವು ಶಾಸಕರಾಗಿ ಗೆದ್ದು ಬಂದಿದ್ದೇವೆ. ನೀವು ಕೇವಲ 25 ಜನ ಸದಸ್ಯರ ಪರವಾಗಿ ಅವಕಾಶ ಮಾಡಿಕೊಟ್ಟರೆ ಇನ್ನುಳಿದ 205 ಸದಸ್ಯರುಗಳು ವಿರೋಧ ಮಾಡುತ್ತಿದ್ದಾರೆ. ಇವರಿಗೆ ಮಾತನಾಡಲಿಕ್ಕೆ ಅವಕಾಶವಿಲ್ಲದಿದ್ದರೆ ಹೊರಗೆ ಹೋಗಲಿ, ಇವರು ಎಲ್ಲಾ ಕಡೆ ಇವತ್ತು ಇಲ್ಲದ ಕೋಮು ಗಲಭೆಗಳನ್ನು ಪ್ರಾರಂಭ ಮಾಡಲಿಕ್ಕೆ ಪ್ರಯತ್ನವನ್ನು ಮಾಡುತ್ತಿದ್ದಾರೆ. ಇವತ್ತು ರೈತರ ಸಮಸ್ಯೆಗಳನ್ನು ಇವರು ಅರ್ಥ ಮಾಡಿಕೊಳ್ಳುತ್ತಿಲ್ಲ. ನಾವೂ ಕೂಡ ಸ್ವತಂತ್ರವಾಗಿ ಗೆದ್ದು ಬಂದ ಶಾಸಕರು, ಸದನದಲ್ಲಿ ಮಾತನಾಡುವ ಹಕ್ಕು ನಮಗೂ ಕೂಡ ಇದೆ. ಇವತ್ತು ನಮ್ಮ ಜನ, ನಮ್ಮ ರೈತರು ನೋಡುತ್ತಿದ್ದಾರೆ. ಇವತ್ತು

ಸದನವಿರುವುದು ಏತಕ್ಕೆ ಅಧ್ಯಕ್ಷರೇ? ನಾವೇನು ಮಾಡಬೇಕು ಈ ಸದನದಲ್ಲಿ? ಯಾವಾಗಲೂ ಇವರು ಬಂದು ಬಾವಿಗೆ ಬೀಳುವುದು, ಸದನವನ್ನು ಹಾಳು ಮಾಡುವುದು ಹೀಗೆ ಇವರು ಮಾಡುತ್ತಿದ್ದರೆ ನೀವು ಎಷ್ಟು ದಿವಸ ಇದನ್ನು ಸಹಿಸುತ್ತೀರಿ? ಇಲ್ಲದಿದ್ದರೆ ಇವತ್ತು ನಾವೂ ಬಾವಿಗೆ ಬರಬೇಕಾಗುತ್ತದೆ. ಇವತ್ತು ನಮ್ಮ ಸದನವನ್ನು ಹಾಳು ಮಾಡುತ್ತಿದ್ದಾರೆ. ದಯವಿಟ್ಟು ಇದನ್ನು ನಿಲ್ಲಿಸಿ ನಮಗೆ ಮಾತನಾಡಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು.

Mr. Speaker : I have allowed Mr. Sampangi to talk. ನಾಯ್ಡು ಅವರೇ, ದಯವಿಟ್ಟು ಇಲ್ಲಿ ಕೇಳಿ. ಸಂಪಂಗಿಯವರಿಗೆ ಮಾತನಾಡಲಿಕ್ಕೆ ನಾನು ಅನುಮತಿಯನ್ನು ಕೊಟ್ಟಿದ್ದೇನೆ. ಜಗದೀಶ್ ಶೆಟ್ಟರ್ ಅವರೇ ತಮ್ಮ ಸದಸ್ಯರಿಗೆ ಹೇಳಿ. ಏನಿದೆಲ್ಲಾ? ಒಬ್ಬ ಸದಸ್ಯರಿಗೆ ಮಾತನಾಡಲು ಅವರಿಗೆ ನಾನು ಅನುಮತಿ ಕೊಟ್ಟಾಗ ಮಧ್ಯೆ ಹೀಗೆ ಗೊಂದಲ ಮಾಡುವುದು ಸರಿಯಲ್ಲ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಸಂಪಂಗಿಯವರು ಏನು ವಿಷಯಗಳನ್ನು ಹೇಳಿದರು, ಇದರ ಬಗ್ಗೆ ಸರ್ಕಾರವು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಅವರು ಏನು ಕೆಲವು ವಿಷಯಗಳ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಿದರು, ನಾನೂ ಸಹ ಅದೇ ವಿಷಯಗಳ ಬಗ್ಗೆ ಮೊನ್ನೆ ಸದನದಲ್ಲಿ ಕಳಕಳಿ ವ್ಯಕ್ತಪಡಿಸಿದ್ದೇನೆ. ಇಡೀ ರಾಜ್ಯದಲ್ಲಿ ಬರಗಾಲದ ಬವಣೆ, ರೈತರು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದಾರೆ, ಬೆಳೆ ವಿಮೆಯನ್ನು ಬಿಡುಗಡೆ ಮಾಡಿಲ್ಲ. ಹಳದಿ ಕಾರ್ಡಿನ ತೊಂದರೆಯನ್ನು ಬಡವರು ಅನುಭವಿಸುತ್ತಿದ್ದಾರೆ, ವಿದ್ಯುತ್ತಿನ ಅಭಾವ, ಈ ವಿಷಯಗಳನ್ನು ಚರ್ಚೆ ಮಾಡಬೇಕೆಂದು ಇವತ್ತು ನಮಗೂ ಮನಸ್ಸಿದೆ. ಆದರೆ ಈ ಸರ್ಕಾರವು ಭ್ರಷ್ಟಾಚಾರದ ಕೂಪದಲ್ಲಿ ಬಿದ್ದುಬಿಟ್ಟಿದೆ. ಇವತ್ತು ಇದರ ಬಗ್ಗೆ ಸರಿಯಾಗಿ ಸ್ಪಂದನ ಮಾಡಲಿಕ್ಕೂ ತಯಾರಿಲ್ಲ. ಮೊನ್ನೆ ಈ ಬಗ್ಗೆ ಪತ್ರಿಕೆಗಳಲ್ಲಿ ಬಂದಂತಹ ಒಂದೆರಡು ಮೂರು ಶಬ್ದಗಳನ್ನು ಇವತ್ತು ಓದುತ್ತಿದ್ದೇನೆ. ಇವತ್ತು ಜೈಲಿನಲ್ಲಿರುವ ಕರೀಂಲಾಲ್ ಸ್ಟೇಟ್‌ಮೆಂಟ್ ಕೊಡಲಿಕ್ಕೆ ತಯಾರಿದ್ದಾನೆ. ಇವತ್ತು ಅವನು ಕನ್‌ಫೆಸ್ ಸ್ಟೇಟ್‌ಮೆಂಟ್ ಕೊಡಲಿಕ್ಕೂ ತಯಾರಿದ್ದಾನೆ.

ಶ್ರೀ ಎನ್.ಸಂಪಂಗಿ : ಅಧ್ಯಕ್ಷರೇ, ಇವತ್ತು ಬರ್ ಇದೆ, ಬರದ ವಿಚಾರ ಇವರು ಮಾತನಾಡಲಿ, ಇವತ್ತು ಪ್ರಶ್ನೋತ್ತರದಲ್ಲಿ ಬರದ ವಿಚಾರ ಇದೆ, ಅದಕ್ಕೆ ಅವಕಾಶವನ್ನು ಕೊಡಿ ಅಧ್ಯಕ್ಷರೇ, ಇದು ಬಹಳ ಅನ್ಯಾಯವಿದು. 24 ಜನ ಸದಸ್ಯರಿಗೋಸ್ಕರ 200 ಜನ ಸದಸ್ಯರನ್ನು ಕಡೆಗಣಿಸುತ್ತಿದ್ದೀರಿ, ಇದು ಸರಿಯಲ್ಲ. ಇವತ್ತು ಸದನದ ಕಲಾಪಕ್ಕೆ ಅಡ್ಡಿಮಾಡುತ್ತಿರುವವರನ್ನು ಹೊರಗೆ ಕಳುಹಿಸಿ, ಸದನಕ್ಕೆ ಅಗೌರವವನ್ನು ತೋರಿಸುತ್ತಿರುವವರ ವಿರುದ್ಧ ಕ್ರಮ ಕೈಗೊಂಡು ಕಲಾಪವನ್ನು ನಡೆಸಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಇದನ್ನು ಮುಂದುವರಿಸಲಿಕ್ಕೆ ಅವಕಾಶ ಕೊಡಬೇಡಿ, ಇವತ್ತು ಮಾನ್ಯ ಗೃಹಸಚಿವರು ಇದರ ಬಗ್ಗೆ ಶ್ವೇತಪತ್ರವನ್ನು ಕೊಟ್ಟಿದ್ದಾರೆ. ಇದರ ಪ್ರಕಾರ ಎಲ್ಲಾ ನಡೆದುಹೋಗಿದೆ. ಇನ್ನು ಏನು ಬೇಕಾಗಿದೆ ಇವರಿಗೆ? ದಯವಿಟ್ಟು ಇದನ್ನೆಲ್ಲಾ ನಿಲ್ಲಿಸಿ; ಇಲ್ಲವಾದರೆ ರೈತರು ಇದರ ಬಗ್ಗೆ ವಿರೋಧಿಸಬೇಕಾಗುತ್ತದೆ. ಒಂದು ಕಡೆ ಕೋಮುಗಲಭೆಗೆ ಪ್ರಚೋದನೆಯನ್ನು ಕೊಡುತ್ತಾರೆ. ಮತ್ತೊಂದು ಕಡೆ ರೈತರ ಹೆಸರು ಹೇಳುತ್ತಾ ಅವರ ಅಧಿಕಾರವನ್ನು ಕಿತ್ತುಕೊಳ್ಳುತ್ತಿದ್ದಾರೆ. ಇವತ್ತಾದರೂ ರೈತರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಕೊಡಲಿ, ಕೇವಲ ಛಾಪಾ ಕಾಗದದ ನೆಪದಲ್ಲಿ ವಿಧಾನಸಭೆಯ ಸಮಯವನ್ನು ಹಾಳುಮಾಡುತ್ತಿದ್ದಾರೆ. ಛಾಪಾ ಕಾಗದದ ಬಗ್ಗೆ ಮಾನ್ಯ ಗೃಹ ಸಚಿವರು ಉತ್ತರ ಕೊಟ್ಟಿದ್ದಾರೆ. ಇನ್ನೂ ಏನು ಬೇಕು ಇವರಿಗೆ? ದಯವಿಟ್ಟು ಇವತ್ತು ಪ್ರಶ್ನೋತ್ತರ ನಡೆಯಲಿ, ನಂತರ ಇವರಿಗೆ ಅವಕಾಶ ಕೊಡಿ.